# ಸಿದ್ಧಲಿಂಗಯ್ಯನವರ ನಾಟಕಗಳು: ಶೋಷಿತ ಸಮುದಾಯಗಳ ಆತ್ಮವಿಮರ್ಶೆ ಮತ್ತು ಆತ್ಮಾಭಿಮಾನದ ಸಂಕಥನ.

**ಡಾ. ಶಿವಲಿಂಗೇಗೌಡ ಡಿ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಮನಗರ.

**Article Link: https://aksharasurya.com/2023/08/shivalingegowda-d/**

**ABSTRACT:**

ಕನ್ನಡ ಸಾಂಸ್ಕೃತಿಕ ಲೋಕದ ಮಹತ್ವದ ಚಿಂತಕರೂ, ಕವಿಗಳೂ ಆದ ಸಿದ್ಧಲಿಂಗಯ್ಯನವರು ತಮ್ಮ ಸಾಹಿತ್ಯ, ಚಿಂತನೆ, ಹೋರಾಟಗಳ ಮೂಲಕ ಸಮಾನತೆಯನ್ನು ನನಸಾಗಿಸಲು ನಿರಂತರ ಹೋರಾಡಿದವರು. ಅಸಮಾನತೆಯ ಮೂಲಬೇರುಗಳನ್ನು ಶೋಧಿಸುವ ಮೂಲಕ ಶೋಷಕ ವರ್ಗದ ಹುನ್ನಾರಗಳನ್ನು ನಿಷ್ಠುರವಾಗಿ ವ್ಯಂಗ್ಯಕ್ಕೆ ಒಳಪಡಿಸಿದವರು. ತಮ್ಮ ಸಾಹಿತ್ಯದ ಮೂಲಕ ಶೋಷಿತ ಸಮೂದಾಯಗಳ ಆತ್ಮಘನತೆಯನ್ನು ಎತ್ತಿ ಹಿಡಿಯುವುದರೊಂದಿಗೆ ಮಾನವೀಯ ಸಮಸಮಾಜವನ್ನು ಕಟ್ಟುವ ಕನಸು ಕಂಡವರು. ಸಿದ್ಧಲಿಂಗಯ್ಯನವರ ಏಕಲವ್ಯ, ಪಂಚಮ ಮತ್ತು ನೆಲಸಮ ಈ ಮೂರೂ ನಾಟಕಗಳು ನಮ್ಮ ಸಾಮಾಜಿಕ ವ್ಯವಸ್ಥೆಯ ತರತಮಗಳ ಮೂಲ ಬೇರುಗಳನ್ನು ತಡಕಾಡುವುದರ ಜೊತೆಗೆ ಶೋಷಿತ ಸಮುದಾಯಗಳ ಆತ್ಮವಿಮರ್ಶೆ ಮತ್ತು ಆತ್ಮಾಭಿಮಾನದ ಸಂಕಥನಗಳನ್ನು ಕಟ್ಟಿಕೊಡುತ್ತವೆ.

**KEY WORDS:** ನಾಟಕ ಸಾಹಿತ್ಯ, ದಲಿತ ಸಾಹಿತ್ಯ, ಸಾಂಸ್ಕೃತಿಕ ವಿಮರ್ಶೆ, ಸಾಂಸ್ಕೃತಿಕ ರಾಜಕಾರಣ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರು 'ದಲಿತ ಸಾಹಿತಿ' ಎಂದು ಗುರುತಿಸಲ್ಪಟ್ಟಿದ್ದಾರೆ. ಆದರೆ ಅವರ ಒಟ್ಟು ಸಾಹಿತ್ಯದ ಸ್ವರೂಪ ಮತ್ತು ಧೋರಣೆಗಳನ್ನು ಗಮನಿಸಿದರೆ 'ದಲಿತ ಸಾಹಿತಿ' ಎಂಬ ಚೌಕಟ್ಟನ್ನು ಮೀರಿ ಅವರು ಕನ್ನಡದ ಮಹತ್ವದ ಲೇಖಕ, ಚಿಂತಕ, ಹೋರಾಟಗಾರ ಹಾಗೂ ಸಾಂಸ್ಕೃತಿಕ ನಾಯಕರಾಗಿದ್ದರು ಎಂಬುದು ವೇದ್ಯವಾಗುತ್ತದೆ. ಅವರ ಸಾಹಿತ್ಯ ಕೃತಿಗಳು ಕೇವಲ ದಲಿತರ ಬದುಕನ್ನಷ್ಟೇ ಚಿತ್ರಿಸದೆ ಅದರಾಳದಲ್ಲಿ ಶೋಷಿತ ಸಮುದಾಯಗಳ ಎದೆಯಾಳದ ನೋವುಗಳನ್ನು, ಪ್ರಶ್ನೆಗಳನ್ನು, ಕನಸುಗಳನ್ನು, ದೌರ್ಬಲ್ಯ ಮತ್ತು

ಸಾಮರ್ಥ್ಯಗಳನ್ನು, ಆತ್ಮ ವಿಮರ್ಶೆ ಮತ್ತು ಆತ್ಮಾಭಿಮಾನವನ್ನು ಅತ್ಯಂತ ನಿಷ್ಠುರವಾಗಿ ಕಟ್ಟಿಕೊಡುತ್ತವೆ. ಸಿದ್ಧಲಿಂಗಯ್ಯನವರಿಗೆ ಶೋಷಿತ ಸುಮುದಾಯಗಳ 'ಒಡಲಾಳ' ಹಾಗೂ ತಾವು ಬದುಕುತ್ತಿರುವ ಸಾಮಾಜಿಕ ವ್ಯವಸ್ಥೆಯ ಸೂಕ್ಷ್ಮಗಳ ಅರಿವಿದೆ. ಹಾಗಾಗಿ ಅವರ ಸಾಹಿತ್ಯ ಕೃತಿಗಳು ನಮ್ಮ ಸಾಮಾಜಿಕ ವ್ಯವಸ್ಥೆಯ ತರತಮಗಳ ಮೂಲವನ್ನು ಶೋಧಿಸುವ ಪ್ರಯತ್ನ ಮಾಡುತ್ತವೆ. ತಮ್ಮದೇ ಆದ ಹಾಸ್ಯ, ಲೇವಡಿ, ವ್ಯಂಗ್ಯದ ಮುಖಾಂತರ ನಮ್ಮ ಸಾಮಾಜಿಕ ವ್ಯವಸ್ಥೆಯ ತರತಮಗಳಿಗೆ ಕಾರಣ ಹಾಗೂ ಶೋಷಿತ ಸಮುದಾಯಗಳ ಮುಂದಿರುವ ಆಯ್ಕೆಗಳನ್ನು ಒಂದು ಅಂತರದಲ್ಲಿ ನಿಂತು ಶೋಧಿಸುವ ಕ್ರಮ ವಿಶಿಷ್ಟವಾದುದು. ಸಿದ್ಧಲಿಂಗಯ್ಯನವರ ಏಕಲವ್ಯ, ಪಂಚಮ ಮತ್ತು ನೆಲಸಮ ಈ ಮೂರೂ ನಾಟಕಗಳು ನಮ್ಮ ಸಾಮಾಜಿಕ ವ್ಯವಸ್ಥೆಯ ತರತಮಗಳ ಮೂಲ ಬೇರುಗಳನ್ನು ತಡಕಾಡುವುದರ ಜೊತೆಗೆ ಶೋಷಿತ ಸಮುದಾಯಗಳ ಆತ್ಮವಿಮರ್ಶೆ ಮತ್ತು ಆತ್ಮಾಭಿಮಾನದ ಸಂಕಥನಗಳನ್ನು ಕಟ್ಟಿಕೊಡುತ್ತವೆ. ನಮ್ಮ ಸಾಮಾಜಿಕ ವ್ಯವಸ್ಥೆಯ ತರತಮಗಳಿಗೆ ಕಾರಣಗಳನ್ನು ಮೇಲ್ವರ್ಗ ಮತ್ತು ಶೋಷಿತ ಸಮುದಾಯ ಈ ಎರಡೂ ನೆಲೆಗಳಲ್ಲಿ ನಿರ್ಲಿಪ್ತವಾಗಿ ಹುಡುಕಾಡುವ ಸಿದ್ಧಲಿಂಗಯ್ಯನವರು ಸಮಾನತೆಯ ಸಮಾಜ ನಿರ್ಮಾಣದ ದಾರಿಗಳನ್ನು ಶೋಷಿತ ಸಮುದಾಯಗಳು ತಮ್ಮ ಆತ್ಮಾಭಿಮಾನವನ್ನು ಕೆರಳಿಸಿಕೊಳ್ಳುವ ಮೂಲಕ ಕಂಡುಕೊಳ್ಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತಾರೆ.

ಏಕಲವ್ಯ ನಾಟಕ ಶೋಷಿತ ಸಮುದಾಯಗಳ ಬೌದ್ಧಿಕ, ದೈಹಿಕ ಶಕ್ತಿ ಸಾಮರ್ಥ್ಯಗಳು ಮತ್ತು ಆತ್ಮಾಭಿಮಾನಗಳನ್ನು ನಿಯಂತ್ರಿಸುತ್ತಾ, ದಮನಗೊಳಿಸುತ್ತಾ ಬಂದ ಹಾಗೂ ತಮ್ಮ ಸ್ವಾರ್ಥಕ್ಕೆ ದಾಳಗಳನ್ನಾಗಿ ಬಳಸಿಕೊಳ್ಳುತ್ತಾ ಬಂದ ವರ್ಗಗಳ ಜೊತೆಗೆ ಒಂದು ಸಂಕಥನವನ್ನು ಬೆಳೆಸುತ್ತದೆ. ಈ ಸಂಕಥನ ಕ್ಷತ್ರಿಯರು, ಬ್ರಾಹ್ಮಣರು ಮತ್ತು ಶೋಷಿತ ಸಮುದಾಯಗಳ ನಡುವೆ ಬೆಳೆಯುತ್ತಾ ನಮ್ಮ ಸಾಮಾಜಿಕ ವ್ಯವಸ್ಥೆಯ ತರತಮಗಳ ಹುಟ್ಟಿನ ಮೂಲವನ್ನು ಲೇವಡಿ ಮಾಡುತ್ತದೆ. ತರತಮಗಳ ಮೂಲಾಧಾರಗಳಾದ ಧರ್ಮ, ಶಾಸ್ತ್ರಗಳನ್ನು ಬರೆದವರು ಯಾರು? ಬರೆಸಿದವರು ಯಾರು? ಬಳಸಿಕೊಂಡವರು ಯಾರು? ನಿಯಂತ್ರಿಸುವವರು ಯಾರು? ನಿಯಂತ್ರಣಕ್ಕೆ ಒಳಗಾದವರು ಯಾರು? ನಿಯಂತ್ರಿಸುವುದರ ಹಿಂದಿನ ಉದ್ದೇಶಗಳೇನು? ಎಂಬ ಚರ್ಚೆಗಳೇ ಈ ತರತಮಗಳ ಅವೈಜ್ಞಾನಿಕ, ಅವೈಚಾ–ರಿಕ, ಆಧಾರರಹಿತತೆಯನ್ನು ಸಾಬೀತುಪಡಿಸುತ್ತವೆ. ಮುಂದುವರಿದು ಈ ಚರ್ಚೆ ಶೋಷಿತ ಸಮುದಾಯಗಳ ಅದಮ್ಯ ಬೌದ್ಧಿಕ ಮತ್ತು ದೈಹಿಕ ಶಕ್ತಿ–ಸಾಮರ್ಥ್ಯಗಳನ್ನು ಸಹಿಸಲಾಗದ, ಎದುರಿಸಲಾಗದ ಅಸಹಾಯಕತೆಯಲ್ಲಿ ಅವುಗಳನ್ನು ನಿಯಂತ್ರಿಸುವ,

ದಮನಿಸುವ ಅಸ್ತ್ರಗಳನ್ನಾಗಿ, ಶಾಸ್ತ್ರ ಧರ್ಮಗಳನ್ನು ಸೃಷ್ಟಿಸಲಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೆ ಈ ನಿಯಂತ್ರಣ ಮತ್ತು ದಮನಕ್ಕೆ ಮೇಲ್ವರ್ಗ, ಧರ್ಮ ಶಾಸ್ತ್ರಗಳಷ್ಟೇ ಕಾರಣವೆಂದು ಹೇಳುತ್ತಿಲ್ಲ. ಅವುಗಳ ಬಗೆಗೆ ಎಚ್ಚರವಿಲ್ಲದ ಸ್ಥಿತಿಯೂ ಕಾರಣವೆಂದು ಈ ನಾಟಕ ಚರ್ಚಿಸುತ್ತದೆ. ಶೋಷಿತ ಸಮುದಾಯಗಳು ತಮ್ಮ ಆತ್ಮವಿಮರ್ಶೆ ಮಾಡಿಕೊಂಡು ಶೋಷಣೆಗೆ ಬಳಕೆಯಾಗುವ ಅಸ್ತ್ರಗಳ ಬಗೆಗೆ ಎಚ್ಚರದಿಂದ ಇರಬೇಕಾದುದರ ಜೊತೆಗೆ ತಮ್ಮ ಆತ್ಮಾಭಿಮಾನವನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವಿದೆ. ಎಲ್ಲಿಯವರೆಗೆ ಶೋಷಿತ ಸಮುದಾಯಗಳು ಎಚ್ಚರ ತಪ್ಪಿ ಶೋಷಕರ ದಾಳಗಳಾಗಿ ಬಳಕೆಯಾಗುತ್ತಿರುತ್ತಾರೋ ಅಲ್ಲಿಯವರೆಗೆ ಈ ತರತಮಗಳನ್ನು ನಾಶಮಾಡಲು ಸಾಧ್ಯವಿಲ್ಲ. ಸಮಾನತೆಯ ಸಮಾಜ ನಿರ್ಮಾಣವಾಗಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಏಕಲವ್ಯನ ತಾಯಿ ಹೇಳುವ ಮಾತುಗಳು ಧ್ವನಿಪೂರ್ಣವಾಗಿವೆ. "ಪಟ್ಟಣದವರನ್ನು ಅಡಗಿಸಬೇಕಾದರೆ ಅವರ ಪಟ್ಟುಗಳನ್ನೇ ಹಾಕಬೇಕು. ಅವರ ಬಾಣ ದಿಕ್ಕು ತಪ್ಪಬೇಕಾದರೆ ಊರಿನವರ ರೀತಿ ನೀತಿಯಲ್ಲೇ ಅದನ್ನು ಕತ್ತರಿಸಬೇಕು."[1] ಎಂಬ ಮಾತುಗಳು ತಳಸಮುದಾಯಗಳಲ್ಲಿ ಮೂಡಬೇಕಾದ ಆತ್ಮಾಭಿಮಾನದ ಮತ್ತು ಅದನ್ನು ಕಾಪಾಡಿಕೊಳ್ಳಲು ಬೇಕಾದ 'ಎಚ್ಚರ'ದ ಅಗತ್ಯವನ್ನು ಹೇಳುತ್ತವೆ.

ಶೋಷಿತ ಸಮುದಾಯಗಳು ಮೇಲ್ವರ್ಗದವರ ದಾಳಗಳಾಗಿ ಬಳಕೆಯಾಗಿರುವುದರಿಂದಲೇ ತರತಮ, ಶೋಷಣೆಯ ಅಸಹನೀಯ ವಿರಾಟ್ ರೂಪಗಳನ್ನು ಇನ್ನೂ ಕಾಣಲು ಸಾಧ್ಯವಾಗಿರುವುದು. ಈ ಚರ್ಚೆಯನ್ನು ಭೀಷ್ಮ-ದ್ರೋಣರ ಚರ್ಚೆಯ ಮೂಲಕ ಬೆಳೆಸುತ್ತಾ ಮುಂದೆ ಭೀಮ, ಅರ್ಜುನ, ದುರ್ಯೋಧನ, ಕರ್ಣ, ಧರ್ಮರಾಯ, ಕೃಷ್ಣರ ನಡುವೆ ನಡೆಯುವ ಸಂಭಾಷಣೆಯ ಮೂಲಕ ಮುಂದುವರಿಸುತ್ತಾರೆ. ತರತಮ ಸ್ಥಿತಿಯನ್ನು ಕಾಪಿಡುವ, ಅದಕ್ಕಾಗಿ ತಳಸಮುದಾಯಗಳ ಶಕ್ತಿ ಸಾಮರ್ಥ್ಯಗಳನ್ನು ನಿಯಂತ್ರಿಸುವ, ಅವುಗಳನ್ನು ತಮ್ಮ ಸ್ವಾರ್ಥ್ಯಕ್ಕೆ ದಾಳಗಳನ್ನಾಗಿ ಬಳಸಿಕೊಳ್ಳುವ 'ರಾಜಕಾರಣವನ್ನು' ಐದು, ಏಳು, ಒಂಭತ್ತು, ಹತ್ತನೇ ದೃಶ್ಯಗಳು ಸಮರ್ಥವಾಗಿ ಲೇವಡಿ ಮಾಡುತ್ತವೆ. ಆದರೆ ಹತ್ತನೇ ದೃಶ್ಯದಲ್ಲಿ ಏಕಲವ್ಯ ಕರುಕ್ಷೇತ್ರ ಯುದ್ಧದಲ್ಲಿ ತಾನು ಯಾರ ಪರವೂ ನಿಲ್ಲದೆ ತಟಸ್ಥವಾಗಿ ಉಳಿಯುವ ನಿರ್ಧಾರ ಪ್ರಕಟಿಸುವ ಮೂಲಕ ತಾನು ಇನ್ನೊಬ್ಬರ ದಾಳವಾಗಲಾರೆ ಎಂದು ಹೇಳುವುದು ತಳ ಸಮುದಾಯಗಳ ಆತ್ಮಸ್ಥೈರ್ಯ, ಆತ್ಮಾಭಿಮಾನದ ಹಾಗೂ ಅವರಲ್ಲಿ ಎಚ್ಚರವಾದ ಜಾಗೃತಿಯ ಸಂಕೇತವಾಗುತ್ತದೆ.

ತಳ ಸಮುದಾಯಗಳ ಶಕ್ತಿ, ಪ್ರತಿಭೆಗಳನ್ನು ನಿಯಂತ್ರಿಸುತ್ತಾ ಕೇವಲ

ದಾಳಗಳನ್ನಾಗಿ ಮಾತ್ರ ಬಳಸಿಕೊಳ್ಳುತ್ತಾ ಬಂದದ್ದರ ಪರಂಪರೆಯನ್ನೇ ತೆರೆದಿಡುತ್ತಾ, ಲೇವಡಿ ಮಾಡುತ್ತಾ ಬರುವ ನಾಟಕದ ಸನ್ನಿವೇಶಗಳು ಕೊನೆಗೆ ಎಚ್ಚರ, ಆತ್ಮಾಭಿಮಾನದ ಆಸ್ಫೋಟದ ತಿರುವನ್ನು ಪಡೆಯುವುದು ಅತ್ಯಂತ ಅಗತ್ಯದ ತಿರುವಾಗಿದೆ. ಇಲ್ಲಿ ಏಕಲವ್ಯ ಯಾರ ದಾಳಕ್ಕೂ ಬಲಿಯಾಗದೆ ನ್ಯಾಯದ ಪರವಾಗಿ, ಜೀವ ಜಗತ್ತಿನ ಪರವಾಗಿ ನಿಲ್ಲುತ್ತಾನೆ. "ಕುರು ಪಾಂಡವರಲ್ಲಿ ಒಂದು ಪಕ್ಷವಹಿಸಿ ಯಾರೊಬ್ಬರ ದಾಳ ನಾನಾಗಲಾರೆ. ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ ಜ್ಞಾನದ ಗುತ್ತಿಗೆಯನ್ನು ಎತ್ತಿಹಿಡಿಯುವ ಶಾಸ್ತ್ರಗಳ ವಿರುದ್ಧ ನನ್ನ ಯುದ್ಧ. ಮೇಲು ಕೀಳೆಂಬ ವಂಚನೆಯನ್ನು ಅಳಿಸಲು ನನ್ನ ಸಮರ, ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ. ನನ್ನದು ಇಲ್ಲದವರ ಪರವಾದ ಹೋರಾಟ. ಈ ಸಂಘರ್ಷ ಕುರು ಪಾಂಡವರ ವಿರುದ್ಧವೂ ಸಾಗಬೇಕು. ಆಗ ಮಾತ್ರ ತುಳಿತಕ್ಕೆ ಸಿಕ್ಕಿದವರ ಬಾಳಿನಲ್ಲಿ ಬೆಳಕು ಮೂಡುತ್ತದೆ. ಕಡೆಗಣಿಸಲ್ಪಟ್ಟವರ ಬದುಕಿನ ತೋಟದಲ್ಲಿ ಸಮಾನತೆಯ ಹೂ ಅರಳುತ್ತದೆ."[2] ನಾಟಕದ ಕೊನೆಯಲ್ಲಿ ಏಕಲವ್ಯ ಹೇಳುವ ಈ ಮಾತುಗಳು ಜಗತ್ತಿನ ಎಲ್ಲ ಶೋಷಿತ ಸಮುದಾಯಗಳ ಪರವಾಗಿ ಆಡಿದ ಮಾತುಗಳಾಗಿ ಕಂಡುಬರುತ್ತವೆ. ಎಲ್ಲ ಶೋಷಣೆ, ತರತಮಗಳ ಮೂಲೋತ್ಪಾಟನೆಯ ಮಂತ್ರ ಅಡಗಿರುವುದು ಶೋಷಿತ ಸಮುದಾಯಗಳಲ್ಲಿ ಆಗಬೇಕಾದ 'ಎಚ್ಚರ'ದಲ್ಲಿ. ಈ ಎಚ್ಚರ ಆತ್ಮವಿಮರ್ಶೆಯೂ, ಆತ್ಮಾಭಿಮಾನವೂ ಹಾಗೂ ಶೋಷಕ ಶಕ್ತಿಗಳ ತಂತ್ರಗಳ ಬಗೆಗಿನ ಅರಿವೂ ಆಗಿರಬೇಕೆಂಬುದು ನಾಟಕದ ಆಶಯವಾಗಿದೆ.

ಏಕಲವ್ಯ ನಾಟಕ ಶೋಷಕ ವರ್ಗಗಳ ಎದುರಿಗೆ ಒಂದು ಪರ್ಯಾಯ ಸಂಕಥನವೊಂದನ್ನು ಕಟ್ಟುತ್ತಿದೆ. ಇದು ತಳಸಮುದಾಯಗಳ ಆತ್ಮ ಘನತೆಯ ಪರ್ಯಾಯ ಚರಿತ್ರೆಯ ನಿರ್ಮಾಣವೂ ಹೌದು. ನಾಟಕವೇ ಪ್ರಸ್ತಾಪ ಮಾಡುವ ಹಾಗೆ ಇದು 'ಕಾಡಿಗೆ ಹೋರಾಡಿ ಕಾಣ್ಣಾದ ವೀರನ ಕಥೆ'. ಏಕಲವ್ಯ ನಾಟಕದ ಪ್ರಧಾನ ಪಾತ್ರ, ವಿಷಯ ಏಕಲವ್ಯನಾದರೂ ಅವನ ಮೂಲಕ ಆರಂಭವಾಗುವ ಸಂಕಥನ ಶೋಷಿತ ಸಮುದಾಯಗಳ ನಿರ್ಲಕ್ಷಿತ ಚರಿತ್ರೆಗೆ ಸಂಬಂಧಿಸಿದ್ದು. ಈ ನಾಟಕ ಕಾಡು, ನಾಡು, ವಿದ್ಯೆ, ನಾಗರೀಕ, ಅನಾಗರೀಕ, ಯುದ್ಧ, ರಕ್ಷಣೆ, ಗುರು, ಶಿಷ್ಯ, ಗುರುದಕ್ಷಿಣೆ ಈ ಪರಿಭಾಷೆಗಳ ಜನಪ್ರಿಯ ಅರ್ಥವ್ಯಾಖ್ಯೆಗಳನ್ನು, ಪಾವಿತ್ರ್ಯತೆಗಳನ್ನು ಪಲ್ಲಟಗೊಳಿಸುತ್ತದೆ. ಬದಲಾಗಿ ತಳ ಸಮುದಾಯಗಳ ನೆಲೆಯಿಂದ ಹೊಸ ವ್ಯಾಖ್ಯಾನಗಳನ್ನು ಬರೆಯುತ್ತಿದೆ. "ಊರು ಕಾಡಿನ ನಡುವೆ ಅಂತರ ಮೂಡಿ ಧರೆಹತ್ತಿ ಉರಿದಂಥ ಕಥೆಯು"[3] ಎಂಬುದು ಊರು ಕಾಡುಗಳ ನಡುವೆ ಇರುವ ತರತಮಗಳನ್ನು ಬಿಚ್ಚಿಡುತ್ತದೆ. ಊರಿನವರ ವೈರತ್ವ, ಕ್ರೌರ್ಯ, ರಾಜಕಾರಣಗಳನ್ನು

ಕಾಡಿನವರ ಜೀವಪ್ರೀತಿಯೊಂದಿಗೆ ಮುಖಾಮುಖಿಯಾಗಿಸುವ ಮೂಲಕ ಶೋಷಿತ ಸಮೂದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ಮುನ್ನೆಲೆಗೆ ತರುವ ಪ್ರಯತ್ನಮಾಡಲಾಗಿದೆ. ಕಾಡು ಮತ್ತು ಕಾಡಿನವರ ಮೇಲೆ ಅಧಿಕಾರ ಸ್ಥಾಪಿಸುವ, ಕ್ರೌರ್ಯ ಎಸಗುವ ಪ್ರಯತ್ನಗಳು ಅಂತಿಮವಾಗಿ ಅವರ ಬೌದ್ಧಿಕ ಮತ್ತು ದೈಹಿಕ ಶಕ್ತಿ–ಸಾಮರ್ಥ್ಯ, ಪ್ರತಿಭೆಗಳನ್ನು ನಿಯಂತ್ರಿಸಿ ತಮ್ಮ ಸ್ವಾರ್ಥದ ದಾಳಗಳಾಗಿ ಮಾತ್ರ ಬಳಕೆಯಾಗುವ ಹಾಗೆ ನೋಡಿಕೊಳ್ಳುವ ತಂತ್ರಗಾರಿಕೆಯ ರಾಜಕಾರಣಗಳನ್ನು ಈ ನಾಟಕ ವ್ಯಂಗ್ಯ ಮಾಡುತ್ತದೆ. ಎರಡನೇ ದೃಶ್ಯದಲ್ಲಿ ಸೈನಿಕ, ಶೆಟ್ಟಿ, ಗಾಳಣ್ಣ, ಬೋರಣ್ಣರ ಸಂಭಾಷಣೆಗಳಲ್ಲಿ ನಾಡಿನವರ ಕ್ರೌರ್ಯದ ಆಳ – ವಿಸ್ತಾರಗಳಿವೆ. "ಯಾಕ್ ಇಂಗೆ ಮಾಡ್ತಾರೆ, ನಂಪಾಡಿಗೆ ನಮ್ಮನ್ ಬಿಡಾಕಾಗಲ್ವ"[4] ಎಂಬ ಮಾತು ಕಾಡಿನವರ ಮುಗ್ಧತೆ, ಅಸಹಾಯಕತೆಯ ಮೇಲೆ ಎರಗುವ ಕ್ರೌರ್ಯವನ್ನು ಧ್ವನಿಸುತ್ತದೆ.

ಯುದ್ಧ ಗೆಲ್ಲುವುದು, ಕೊಲ್ಲುವುದು, ಊರು ಸುಡುವುದನ್ನೇ ವೀರತ್ವ – ಪೌರುಷವೆಂದು ಬಗೆದ ಊರವರ ಮುಂದೆ ಕಾಡಿನ ಜೀವರಾಶಿಗಳಿಗಾಗಿ, ತನ್ನ ಜನರ ಕಷ್ಟಕ್ಕಾಗಿ ಮಿಡಿದ, ಸೊಕ್ಕಿದವರ ದುಷ್ಟರ ಮಟ್ಟ ಹಾಕಲು ಹೋರಾಡಿದ ವೀರನ ಕಥನವನ್ನು ಮುಖಾಮುಖಿಯಾಗಿಸಿ ವೀರತ್ವಕ್ಕೆ ಹೊಸ ವ್ಯಾಖ್ಯಾನವನ್ನು ಕೊಡಲಾಗಿದೆ. ಮಾನವೀಯತೆಯನ್ನು ಮರೆತ ವೀರತ್ವ ಮೌಲ್ಯವಾಗಲಾರದು. ನಾಗರೀಕ – ಅನಾಗರೀಕ ಜಗತ್ತಿನ ಮೌಲ್ಯಗಳನ್ನು ಮುಖಾಮುಖಿಯಾಗಿಸುವ ಮೂಲಕ ಈ ಪರಿಕಲ್ಪನೆಗಳ ಹಿಂದಿನ ಪೊಳ್ಳುತನವನ್ನು ಬಯಲು ಮಾಡಲಾಗಿದೆ.

ವಿದ್ಯೆ ಮತ್ತು ಅದನ್ನು ಕಲಿಯುವುದಕ್ಕೆ ಸಂಬಂಧಿಸಿದಂತೆ ಊರವರು ಸೃಷ್ಟಿಸಿಕೊಂಡ ಮಿಥ್ ಗಳನ್ನು ಬುಡಮೇಲು ಮಾಡುವ ಪ್ರಯತ್ನವನ್ನು ನಾಟಕ ಮಾಡುತ್ತದೆ. ಏಕಲವ್ಯ ಹೆಚ್ಚಿನ ಬಿಲ್ವಿದ್ಯೆ ಕಲಿಯಲು ದ್ರೋಣರಲ್ಲಿಗೆ ನಾಡಿಗೆ ಹೊರಟಾಗ ಮಾವ ಹೇಳುವ "ಬಿಲ್ಲುವಿದ್ಯೆ ಬೇಡರ ಹುಟ್ಟುಗುಣ, ಅರಸು ಮಕ್ಕಳಿಗೆ ಅದು ಕಲಿಕೆ, ಅರಸು ಮಕ್ಕಳಿಗೆ ಅದು ತೊಟ್ಟ ಬಟ್ಟೆ. ಬೇಡರಿಗೆ ಅದು ಮೈಗಂಟಿದ ಚರ್ಮ"[5] ಎಂಬ ಮಾತುಗಳು ತಳಸಮುದಾಯಗಳ ಪ್ರತಿಭೆಗಳ ಅನನ್ಯತೆಯನ್ನು ಧ್ವನಿಸುತ್ತವೆ. ತಳಸಮುದಾಯಗಳ ಪ್ರತಿಭೆ ಮತ್ತು ಶಕ್ತಿ ಸಾಮರ್ಥ್ಯಗಳನ್ನು ಅರಗಿಸಿಕೊಳ್ಳಲಾಗದ ಊರವರು ಅದನ್ನು ನಿಯಂತ್ರಿಸುವ ಹುನ್ನಾರ ನಡೆಸುತ್ತಾರೆ ಎಂಬುದು ನಾಟಕದುದ್ದಕ್ಕೂ ವ್ಯಂಗ್ಯದೊಂದಿಗೆ ಮೂಡಿಬಂದಿದೆ.

ದ್ರೋಣರಲ್ಲಿ ವಿದ್ಯೆ ಕಲಿಯಲು ಬಂದ ಏಕಲವ್ಯನನ್ನು ಧರ್ಮ ಶಾಸ್ತ್ರಗಳ ಹೆಸರಲ್ಲಿ ತಿರಸ್ಕಾರಕ್ಕೆ ಒಳಗಾಗುವ ಹಾಗೆ ಮಾಡಲಾಗುತ್ತದೆ. ಆದರೆ ಏಕಲವ್ಯ ಧೃತಿಗೆಡದೆ ಸ್ವಸಾಮರ್ಥ್ಯದಿಂದ ಶಬ್ಧವೇದಿ ವಿದ್ಯೆ ಕಲಿಯುತ್ತಾನೆ. ಹೀಗೆ

ಸ್ವಸಾಮರ್ಥ್ಯದಿಂದ ವಿದ್ಯೆ ಕಲಿತರೂ ಅದನ್ನು ಸಹಿಸದ ಊರವರು ಗುರುದಕ್ಷಿಣೆ, ವಚನ ಭ್ರಷ್ಟತೆಯ ಹೆಸರಲ್ಲಿ ನಿಯಂತ್ರಿಸುವ, ದಮನಿಸುವ ಪ್ರಯತ್ನ ಮಾಡುತ್ತಾರೆ. ತಾವು ಕಲಿಸದ ವಿದ್ಯೆಗೆ ಗುರುದಕ್ಷಿಣೆಯನ್ನು ಪಡೆಯುವ ಹಿಂದಿನ ಉದ್ದೇಶವನ್ನು ಈ ನಾಟಕ ಪ್ರಶ್ನಿಸುತ್ತದೆ. ಸ್ವಪ್ರಯತ್ನದಿಂದ ವಿದ್ಯೆ ಕಲಿತರೂ ಅದಕ್ಕೆ ತಾನು ಪೂಜಿಸುವ ಗುರುವೇ ಕಾರಣ ಎಂದು ಗುರುದಕ್ಷಿಣೆಗಾಗಿ ತನ್ನ ಹೆಬ್ಬೆರಳನ್ನೇ ಕೊಟ್ಟ ಏಕಲವ್ಯ. ತನ್ನನ್ನು ಮೀರಿಸಿದ ವಿದ್ಯೆ ಕಲಿತ ಏಕಲವ್ಯನ ಮೇಲೆ ಕರುಬುವ, ಗುರುವನ್ನು ವಚನಭ್ರಷ್ಟತೆಯ ನೆಪದಲ್ಲಿ ಧರ್ಮ ಸಂಕಟದಲ್ಲಿ ಸಿಲುಕಿಸುವ ಅರ್ಜುನ. ಇವರಲ್ಲಿ ಯಾರು ನಿಜವಾದ 'ಶಿಷ್ಯ'?. ಯಾವುದು ವಿದ್ಯೆ? ಯಾರು ನಾಗರೀಕ? ಯಾರು ಅನಾಗರೀಕ? ಎಂಬ ಪ್ರಶ್ನೆಗಳನ್ನು ನಾಟಕ ಎತ್ತುತ್ತದೆ.

ಏಕಲವ್ಯ ಬಲಗೈ ಹೆಬ್ಬೆರಳನ್ನು ಕಳೆದುಕೊಂಡರೂ ಎಡಗೈಯಿಂದ ಬಾಣ ಪ್ರಯೋಗಿಸುವ ವಿದ್ಯೆಯನ್ನು ಕರಗತ ಮಾಡಿಕೊಳ್ಳುತ್ತಾನೆ. ಇದು ಎಂಥ ದಮನಕ್ಕೂ ಬಗ್ಗದೆ ಪುಟಿದೇಳುವ ಸಾಮರ್ಥ್ಯ ತಳಸಮುದಾಯಗಳ ಪ್ರತಿಭೆಗಳಿಗಿದೆ ಎಂಬುದನ್ನು ಸಾಬೀತುಪಡಿಸುತ್ತದೆ. ಅದೇ ಅವರ ಅನನ್ಯತೆ. ತಳ ಸಮುದಾಯಗಳ ಪ್ರತಿಭೆ, ಶಕ್ತಿಗಳನ್ನು ನಿಯಂತ್ರಿಸುವ ಊರವರಿಗೆ ಅವರ ಸರಿಸಮಾನವಾಗಿ ವಿದ್ಯೆ ಕಲಿತು ಎದುರಿಸುವುದು ಅಸಾಧ್ಯ. ಹಾಗಾಗಿಯೇ ಅವರು ಧರ್ಮ, ಶಾಸ್ತ್ರಗಳ ಮೂಲಕ ದಮನಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂಬ ವ್ಯಂಗ್ಯ ಧ್ವನಿಪೂರ್ಣವಾಗಿದೆ. ಇಷ್ಟೆಲ್ಲಾ ದಮನ ಕ್ರಿಯೆಯಲ್ಲಿ ತೊಡಗಿದ ಊರವರು ಅಂತಿಮವಾಗಿ ಕಾಡಿನ ಎಡಗೈ ವೀರನ ಬಳಿ ಸಹಾಯಕ್ಕಾಗಿ ಯಾಚಿಸುವುದು ಅವರ 'ಕಲಿತ ವಿದ್ಯೆಯ' ಪೊಳ್ಳುತನಕ್ಕೆ ಸಾಕ್ಷಿ. ವಿದ್ಯೆ ಕಾಡಿನ ರಕ್ಷಣೆಗಾಗಿ, ಅಸಹಾಯಕರ, ಶೋಷಿತರ ರಕ್ಷಣೆಗಾಗಿ ಎನ್ನುವ ಮೂಲಕ ಊರವರು ವಿದ್ಯೆಯನ್ನು ಕ್ರೌರ್ಯಕ್ಕಾಗಿ ಬಳಸಿಕೊಂಡ ಪರಂಪರೆಯನ್ನೇ ನಾಟಕ ವ್ಯಂಗ್ಯ ಮಾಡುತ್ತದೆ. ವಿದ್ಯೆ ಬಾಹುಬಲದ ಪ್ರದರ್ಶನಕ್ಕೆ, ಕೌರ್ಯಕ್ಕೆ ಬಳಕೆಯಾಗಬಾರದು. ಲೋಕ ಕಲ್ಯಾಣಕ್ಕೆ ಬಳಕೆಯಾಗಬೇಕೆಂಬ ಸಂದೇಶ ಸಾರುವ ಈ ನಾಟಕ, ಹಾಗೆ ಬಳಕೆಯಾದದ್ದರ ಪರಿಣಾಮವಾದ ಕುರುಕ್ಷೇತ್ರ ಯುದ್ಧದಂತ ಕೌರ್ಯಗಳನ್ನು ವಿಮರ್ಶೆಗೆ ಒಳಗುಮಾಡುತ್ತದೆ.

ಕಾಡು ನಾಡಿನ ಸಂಘರ್ಷದ ಕಥೆಯಾದ ಈ ನಾಟಕ ಮೇಲ್ವರ್ಗ ಮತ್ತು ತಳಸಮುದಾಯಗಳ ನಡುವಿನ ಶತಶತಮಾನಗಳ ಹಲಬಗೆಯ ಸಂಘರ್ಷಗಳನ್ನು ಒಟ್ಟಿಗೇ ವಿಮರ್ಶೆಗೆ ಒಡ್ಡುತ್ತದೆ. ಈ ನಾಟಕದ ಶಕ್ತಿ ಅಡಗಿರುವುದು ಊರಿನವರ ಪೌರುಷವನ್ನು ಲೇವಡಿ ಮಾಡುವಲ್ಲಿ, ಕಾಡಿಗೆ ವನ ವಿಹಾರಕ್ಕಾಗಿ ರಾಣಿಯರೊಡಗೂಡಿ ಬಂದ ರಾಜ ಕಂದಕದಲ್ಲಿ ಬಿದ್ದು ನಗೆಪಾಟಲಿಗೆ

ಈಡಾಗುವುದರಿಂದ ಹಿಡಿದು ಅಂತಿಮವಾಗಿ ದುರ್ಯೋಧನ, ಕರ್ಣ, ಅರ್ಜುನ, ದ್ರೋಣ, ಭೀಮ, ಯುದಿಷ್ಠಿರ, ಕೃಷ್ಣ ಇವರೆಲ್ಲಾ ಎಡಗೈವೀರನೊಬ್ಬನ ಮುಂದೆ ಸಹಾಯಕ್ಕಾಗಿ ಯಾಚಿಸುತ್ತಾ ನಿಲ್ಲುವ ದೃಶ್ಯದವರೆಗೆ ಇರುವ ವ್ಯಂಗ್ಯದ ಶಕ್ತಿ ಶೋಷಕ ವರ್ಗಗಳನ್ನು ದಿಗ್ಭ್ರಾಂತಿಗೊಳಿಸುವಂತದ್ದು. ಡಿ.ಆರ್. ನಾಗರಾಜ್ ಅವರು ಸಿದ್ಧಲಿಂಗಯ್ಯನವರ 'ಊರುಕೇರಿ' ಕುರಿತು ಹೇಳುವ ಮಾತು ಇಲ್ಲಿ ಅರ್ಥಪೂರ್ಣ. "ದಲಿತನ ಸಿಟ್ಟಿನಿಂದ ಲೋಕ ಒಡೆದು ಹೋಗುವುದು ಕೊಂಚ ಅನುಮಾನದ ಸಂಗತಿ. ಆದರೆ ಇಲ್ಲಿ ಆತ ಗೊಳ್ಳೆಂದು ನಗುವ ರೀತಿಗೆ ಲೋಕ ಬೆಚ್ಚಿ ಜಾರಿ ಬೀಳುವುದು ಖಾತ್ರಿ".[6] ಈ ಮಾತು ಈ ನಾಟಕಕ್ಕೂ ಅನ್ವಯಿಸುತ್ತದೆ. ನಾಟಕದುದ್ದಕ್ಕೂ ಇರುವ ವ್ಯಂಗ್ಯ, ಹಾಸ್ಯದ ದಾಟಿಗಳು ಶೋಷಕ ಪರಂಪರೆಯನ್ನು ಬೆಚ್ಚಿ ಬೀಳಿಸುತ್ತವೆ.

ತರತಮಗಳ ಹುಟ್ಟು ಮತ್ತು ಬೆಳವಣಿಗೆಯ ಪರಂಪರೆಯನ್ನು ವಿಮರ್ಶೆಗೆ ಒಳಗುಮಾಡುವ ಈ ನಾಟಕಕ್ಕೆ ಸಾಂಸ್ಕೃತಿಕ ಮಹತ್ವವಿದೆ. ತಳಸಮುದಾಯಗಳನ್ನು ನಿಯಂತ್ರಿಸಿ, ಅವರನ್ನು ಅವರೇ 'ಕತ್ತರಿಸಿ' ಕೊಳ್ಳುವ ಹಾಗೆ ಮಾಡಿದ ರಾಜಕಾರಣದ ಬಗೆಗೆ 'ಎಚ್ಚರ'ವನ್ನು ಉಂಟು ಮಾಡುವುದರ ಜೊತೆಗೆ ಅವರನ್ನು ಆತ್ಮವಿಮರ್ಶೆಗೆ ಒಳಗುಮಾಡಿದೆ. ಹಾಗೂ ಅವರ ಆತ್ಮಾಭಿಮಾನದ ಘನತೆಯನ್ನು ಎತ್ತಿಹಿಡಿದಿದೆ.

'ಪಂಚಮ' ನಾಟಕ ಏಕಕಾಲದಲ್ಲಿ ಸರ್ಕಾರ ಹಾಗೂ ಮೇಲ್ವರ್ಗದವರೇ ಅಧಿಕಾರಿಗಳಾಗಿರುವವರು ಆಡುತ್ತಿರುವ 'ಹರಿಜನೋದ್ಧಾರದ ನಾಟಕ'ವನ್ನು ಹಾಗೂ ಈ ಬಿಕ್ಷೆಗೆ ಒಳಗಾಗಿ ಆತ್ಮಾಭಿಮಾನವನ್ನು ಮರೆತ ದಲಿತ ವರ್ಗವನ್ನೂ ವ್ಯಂಗ್ಯ ವಿಮರ್ಶೆಗೆ ಒಡ್ಡಿದೆ. ವಿದ್ಯಾವಂತರಾದರೂ ಎಚ್ಚರ ಮತ್ತು ಆತ್ಮಾಭಿಮಾನವನ್ನು ಮರೆತ ದಲಿತ ವರ್ಗ ಮೇಲ್ವರ್ಗದವರ ಬಿಕ್ಷೆ, ಕೃಪೆಗಳಿಗೆ ಒಳಗಾಗಿ ನಿರಂತರವಾದ ಶೋಷಣೆಗೆ ಒಳಗಾಗುತ್ತಿದ್ದಾರೆ. ಮೇಲ್ವರ್ಗದವರ ಲೈಂಗಿಕ ಶೋಷಣೆ, ದಾಸ್ಯಕ್ಕೆ ಒಳಗಾಗುತ್ತಿದ್ದಾರೆ. ಹಯವದನರಾವ್‌ನ ಕಾಮುಕ ನೋಟಕ್ಕೆ ಒಳಗಾಗುವ ಪುಟ್ಟಲಕ್ಕಮ್ಮ ಮುಗ್ಧತೆ, ತನ್ನ ಜಾತಿಯ ಬಗೆಗೆ ಅಸಹ್ಯ, ದೈನ್ಯತೆಯನ್ನೇ ಹಾಸಿಹೊದ್ದುಕೊಂಡು ಬ್ರಾಹ್ಮಣನಾಗಿ ಬದಲಾಗುತ್ತಿರುವ ಶೇಷಾದ್ರಿ, ರಾಜಕೀಯ ಪಾರ್ಟಿಗಳ ದಾಳವಾಗಿ ಬಳಕೆಯಾಗುತ್ತಿರುವ ಗಾಂಧಿದಾಸ್, ಅಸಹಾಯಕ ಸ್ಥಿತಿಯಲ್ಲಿ ಕೆಲಸಬೇಡಲು ಬಂದಿರುವ ಪಾಪಣ್ಣ ಈ ಎಲ್ಲಾ ಪಾತ್ರಗಳ ಮೂಲಕ ದಲಿತ ವರ್ಗದ ಆತ್ಮವಿಮರ್ಶೆಯನ್ನು ಮಾಡುತ್ತದೆ. ಅಂತಿಮವಾಗಿ ಸರ್ಕಾರದ ಬಿಕ್ಷೆಯಂತಹ ಹರಿಜನೋದ್ಧಾರದ ಯೋಜನೆಗಳನ್ನೂ, ಮೇಲ್ವರ್ಗದವರ ಕೃಪೆಯ ನಾಟಕಗಳನ್ನು ಧಿಕ್ಕರಿಸಿ ದಲಿತ ವರ್ಗ ಆತ್ಮಾಭಿಮಾನದಿಂದ ಹೋರಾಟಕ್ಕಿಳಿಯಬೇಕಾದ

ಅಗತ್ಯತೆಯನ್ನು ನಾಟಕ ಪ್ರತಿಪಾದಿಸುತ್ತದೆ. ಕೊನೆಯಲ್ಲಿ ಬರುವ 'ಪಂಚಮ' ದಲಿತ ವರ್ಗದ ಆತ್ಮಾಭಿಮಾನದ ಎಚ್ಚೆತ್ತ ಚೇತನವಾಗಿ ಕಂಡುಬರುತ್ತಾನೆ.

'ನೆಲಸಮ' ನಾಟಕ ಕೊಳಚೆ ನಿರ್ಮೂಲನ ಕಾರ್ಯದಂತಹ ಕಲ್ಯಾಣ ಕಾರ್ಯಕ್ರಮಗಳ ಹಿಂದಿನ ಕ್ರೌರ್ಯಗಳನ್ನು ವ್ಯಂಗ್ಯವಾಡುತ್ತದೆ. ನಗರಗಳ ಸೌಂದರ್ಯಕ್ಕಾಗಿ, ಶ್ರೀಮಂತರ ಆರೋಗ್ಯ ಕಾಪಾಡಲು, ವಿಜಯನ ಮೂಗುಳಿಸಲು ದುರ್ವಾಸನೆ ಬರುತ್ತಿರುವ ಜಾಗದ ಗುಡಿಸಲುಗಳನ್ನು ನೆಲಸಮ ಮಾಡಲಾಗುತ್ತದೆ. ಬಡವರ, ದಲಿತರ ದುರಂತ ಬದುಕಿನ ಆಳವನ್ನು ಈ ನಾಟಕ ಕಟ್ಟಿಕೊಡುತ್ತದೆ.

ಸಿದ್ಧಲಿಂಗಯ್ಯನವರ ಮೂರೂ ನಾಟಕಗಳು ದಲಿತರ, ಶೋಷಿತ ಸಮೂದಾಯಗಳ ಬದುಕಿನ ದುರಂತದ ಕಾರಣಗಳನ್ನು ಹಾಗೂ ಅವರ ಮುಂದಿರುವ ಆಯ್ಕೆಗಳನ್ನು ನಿರ್ಲಿಪ್ತ ಮತ್ತು ನಿಷ್ಠುರವಾಗಿ ಶೋಧಿಸುತ್ತವೆ. ಹಾಸ್ಯ, ವ್ಯಂಗ್ಯದಂತಹ ವಿಶಿಷ್ಟ ಶೈಲಿಯಲ್ಲಿ ಶೋಷಣೆಯ ಪರಂಪರೆಗಳನ್ನು ಲೇವಡಿ ಮಾಡುವ ಮೂಲಕ ದಲಿತರು, ಶೋಷಿತ ಸಮೂದಾಯಗಳ ಆತ್ಮಾಭಿಮಾನದ ಎಚ್ಚರದಲ್ಲಿ ಸಮಾನತೆಯ ಸಾಕಾರವಿದೆ ಎಂಬ ಸಂದೇಶವನ್ನು ನೀಡುತ್ತವೆ.

**ಕೊನೆ ಟಿಪ್ಪಣಿ:**

1. ಸಿದ್ಧಲಿಂಗಯ್ಯ, ಏಕಲವ್ಯ, ಪು. ಸಂ. 25.
2. ಸಿದ್ಧಲಿಂಗಯ್ಯ, ಏಕಲವ್ಯ, ಪು. ಸಂ. 56.
3. ಸಿದ್ಧಲಿಂಗಯ್ಯ, ಏಕಲವ್ಯ, ಪು. ಸಂ. 13.
4. ಸಿದ್ಧಲಿಂಗಯ್ಯ, ಏಕಲವ್ಯ, ಪು. ಸಂ. 15.
5. ಸಿದ್ಧಲಿಂಗಯ್ಯ, ಏಕಲವ್ಯ, ಪು. ಸಂ. 24.
6. ನಾಗರಾಜ್ ಡಿ. ಆರ್., ಲೇ. ಬಡವರ ನಗುವಿನ ಶಕ್ತಿ, ಊರುಕೇರಿ –1, ಸಿದ್ಧಲಿಂಗಯ್ಯ, ಪು.ಸಂ. 116.

**ಪರಾಮರ್ಶನ ಕೃತಿಗಳು:**


1. ಸಿದ್ಧಲಿಂಗಯ್ಯ, ಊರುಕೇರಿ–1 (2012), ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.
2. ಸಿದ್ಧಲಿಂಗಯ್ಯ, ಏಕಲವ್ಯ (2003), ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.
3. ಸಿದ್ಧಲಿಂಗಯ್ಯ, ಪಂಚಮ ಮತ್ತು ನೆಲಸಮ (2006), ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.
4. ದಂಡಪ್ಪ, ಸಂ. ಬಡವರ ನಗುವಿನ ಶಕ್ತಿ (2015), ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.